


ಡಾ. ಎಂ. ಬಾಲಮುರಳಿಕೃಷ್ಣ ಅವರ ಸಂಗೀತ ಕಛೇರಿ (ಸಂಗ್ರಹ ಚಿತ್ರ)

**ಕಲಾವಿದರು, ಕಲಾವಿದರಿಗಾಗಿ, ಕಲಾವಿದರಿಂದಲೇ ಕಟ್ಟಿದ ಏಕೈಕ ಸಂಗೀತ ಸಂಸ್ಥೆಯೆಂದರೆ ಕರ್ನಾಟಕ ಗಾನಕಲಾ ಪರಿಷತ್ತು. ಕರ್ನಾಟಕ ಶಾಸ್ತ್ರೀಯ ಸಂಗೀತದ ವಿದ್ವಾಂಸರನ್ನೇ ಒಳಗೊಂಡಿರುವ ಈ ವಿಶಿಷ್ಟ ಸಂಗೀತ ಸಂಸ್ಥೆ ಇದೀಗ ಚಿನ್ನದ ಸಂಭ್ರಮದಲ್ಲಿ ಬೀಗುತ್ತಿದೆ.**

■ ಉಮಾ ವೇಣೂರು

# ಗಾನಕಲಾ ಪರಿಷತ್ತು @50

'ಕೇಳನೋ ಹರಿ ತಾಳನೋ, ತಾಳ ಮೇಳಗಳಿದ್ದು ಪ್ರೇಮವಿಲ್ಲದ ಗಾನ...' ಸಂಗೀತ ಪಿತಾಮಹ ಪುರಂದರದಾಸರು ರಚಿಸಿದ ಈ ಕೃತಿ ಗಾಯನಕ್ಕೆ ಸಂಬಂಧಿಸಿದ್ದು. ಒಂದು ಸಂಗೀತ ಸಂಸ್ಥೆಯ ನಿಟ್ಟಿನಲ್ಲಿ ಯೋಚಿಸಿದಾಗ... ಸಂಗೀತ ವಿದ್ವಾಂಸರಿದ್ದು, ನಾದ ಪಸರಿಸಲು ವೇದಿಕೆಯೇ ಇಲ್ಲದಿದ್ದರೆ..? ಒಂದು ಕ್ಷಣ ಕಲ್ಪಿಸಿಕೊಳ್ಳಿ... ಪಾರಂಪರಿಕ ಸಂಗೀತ ಎಲ್ಲರಿಗೂ ತಲುಪಬೇಕು ಎಂಬ ಕಾರಣಕ್ಕಾಗಿಯೇ ಸಂಗೀತ ವಿದ್ವಜ್ಜನರೆಲ್ಲ ಸೇರಿ ಐವತ್ತು ವರ್ಷಗಳ ಹಿಂದೆ ಒಂದು ಘನತೆವೆತ್ತ ಸಂಗೀತ ಸಂಸ್ಥೆ ಹುಟ್ಟು ಹಾಕಿದರು. ನೀರೆರೆದು ಪೋಷಿಸಿ ಕಟ್ಟಿ ಬೆಳೆಸಿದರು. ನೂರಾರು ಕಲಾವಿದರಿಗೆ ವೇದಿಕೆ ಒದಗಿಸಿದರು, ಸಂಗೀತ ಸಾಧಕರನ್ನು ಗುರುತಿಸಿ ಸನ್ಮಾನಿಸಿದರು. 'ಕರ್ನಾಟಕ ಗಾನಕಲಾ ಪರಿಷತ್ತು' ಎಂಬ ಈ ಸಂಗೀತ ಸಂಸ್ಥೆ ಹತ್ತು ಹಲವು ಏಳುಬೀಳುಗಳನ್ನು ದಾಟಿ, ಸವಾಲುಗಳನ್ನು ದಿಟ್ಟವಾಗಿ ಎದುರಿಸಿ ಇದೀಗ ಹೆಮ್ಮರವಾಗಿ ಬೆಳೆದಿದೆ. ಸುವರ್ಣ ಮಹೋತ್ಸವ ಆಚರಣೆಗೂ ಸಜ್ಜಾಗಿದೆ.

ಕರ್ನಾಟಕ ಶಾಸ್ತ್ರೀಯ ಸಂಗೀತದ ಶ್ರೇಯೋಭಿವೃದ್ಧಿಗಾಗಿ, ಸೂಕ್ತ ಕಲಾವೇದಿಕೆಗಳಿಗಾಗಿ 1969ರ ಡಿಸೆಂಬರ್‌ನಲ್ಲಿ ಅಸ್ತಿತ್ವಕ್ಕೆ ಬಂದ ಸಂಸ್ಥೆಯೇ ಕರ್ನಾಟಕ ಗಾನಕಲಾ ಪರಿಷತ್ತು. ವಿದ್ವಾಂಸರಾದ ಎಂ. ಸುಬ್ಬರಾವ್, ಬೆಂಗಳೂರು ಕೆ. ವೆಂಕಟ್ರಾಮ್, ಎಚ್.ವಿ. ಕೃಷ್ಣಮೂರ್ತಿ, ಆನೂರು ರಾಮಕೃಷ್ಣ, ಬಿ.ವಿ.ಕೆ. ಶಾಸ್ತ್ರೀ, ಎಚ್.ಪಿ. ರಾಮಾಚಾರ್, ಹೊನ್ನಪ್ಪ ಭಾಗವತರ್, ಎಲ್.ಎಸ್. ಶೇಷಗಿರಿ ರಾವ್, ವಿ.ಎನ್.ರಾವ್, ರಾಜಾರಾವ್, ತಿರುಮಲೆ ಶ್ರೀರಂಗಾಚಾರ್, ಚಂದ್ರಕಲಾ, ಕುರುಡಿ ವೆಂಕಣ್ಣಾಚಾರ್ ಮುಂತಾದವರು ಈ ಸಂಸ್ಥೆ ಉದಯಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 1970ರಲ್ಲೇ ಮೊದಲ ಸಂಗೀತ ಸಮ್ಮೇಳನವನ್ನೂ ಆಯೋಜಿಸಿದ್ದರು. ಬಿ.ಎಸ್. ರಾಜಯ್ಯಂಗಾರ್ ಅವರು ಮೊದಲ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಪರಿಷತ್ತಿನ ಮೂಲಕ ನೂರಾರು ಕಲಾವಿದರು ಒಂದೆಡೆ ಸೇರುವಂತಾಗಿತ್ತು. ಸಂಗೀತದ ಘಮಲನ್ನು ಊರು ತುಂಬ ಹರಡಲಾರಂಭಿಸಿತು.

ಸಂಗೀತದ ಮೂಲಕ ಜನರಲ್ಲಿ ಭಕ್ತಿಮಾರ್ಗ, ಸಾತ್ವಿಕ ಮಾರ್ಗವನ್ನು ಪೋಷಿಸುವಂತಹ ಕೆಲಸವನ್ನು ಸಂಸ್ಥೆ ಮಾಡುತ್ತಿದೆ. ವಿದ್ವತ್ ಗೋಷ್ಠಿ ಆಯೋಜಿಸಿ, ಸಂಗೀತ ಮತ್ತು ಸಂಸ್ಕೃತಿಯನ್ನು ನಿರಂತರವಾಗಿ ಪೊರೆಯುತ್ತಿದೆ. ಪರಿಷತ್ 49ನೇ ವಾರ್ಷಿಕ ಸಮ್ಮೇಳನ ಹಾಗೂ 31ನೇ ಯುವ ಸಮ್ಮೇಳನವನ್ನು ಪೂರೈಸಿ ಇದೀಗ ವಿಶಿಷ್ಟ ಮೈಲಿಗಲ್ಲಿನತ್ತ ಸಾಗಿ ಚಿನ್ನದ ಸಂಭ್ರಮದಲ್ಲಿ ಬೀಗುತ್ತಿದೆ.

ಸಾಧನೆಗೆ ಮನ್ನಣೆ ಸಿಗುವುದು ಪ್ರಶಸ್ತಿ, ಪುರಸ್ಕಾರಗಳಿಂದ. ಅಂತೆಯೇ ಗಾನಕಲಾ ಪರಿಷತ್ತು ವರ್ಷಕ್ಕೊಮ್ಮೆ ರಾಜ್ಯಮಟ್ಟದ ಸಂಗೀತ ಸಮ್ಮೇಳನ ಆಯೋಜಿಸಿ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಉನ್ನತ ಸಾಧನೆ ಮಾಡಿದ ಕಲಾವಿದರಿಗೆ 'ಗಾನ ಕಲಾಭೂಷಣ' ಹಾಗೂ ಯುವ ವಿದ್ವಾಂಸರಿಗೆ 'ಗಾನಕಲಾಶ್ರೀ' ಪ್ರಶಸ್ತಿ ನೀಡಿ ಗೌರವಿಸುತ್ತದೆ.

## ಬೇರೆ ಸಂಗೀತ ಸಂಸ್ಥೆಗಳಿಗೂ ಬೆಂಬಲ

ಕರ್ನಾಟಕ ಗಾನ ಕಲಾಪರಿಷತ್ ವರ್ಷವಿಡೀ ಬೇರೆ ಸಂಗೀತ ಸಂಸ್ಥೆಗಳಿಗೆ ಸಂಗೀತ ಕಛೇರಿ ಏರ್ಪಡಿಸಲು ಎಲ್ಲ ರೀತಿಯ ಸಹಕಾರ ಕೊಡುತ್ತಾ ಬಂದಿದೆ. ಹಲವಾರು ವರ್ಷಗಳಿಂದ ಸಂಗೀತ ಸೇವೆ ಮಾಡುತ್ತಾ ಬರುತ್ತಿರುವ ಸಂಗೀತ ಸಂಸ್ಥೆಗಳಾದ ಮಲ್ಲೇಶ್ವರಂ ಸಂಗೀತ ಸಭಾ, ತ್ಯಾಗರಾಜ ಸಂಗೀತ ಸಭಾ, ವಿಜಯನಗರ ಸಂಗೀತ ಸಭಾ, ತುಮಕೂರು ರಾಘವೇಂದ್ರ ಸಂಗೀತ ಸಭಾ, ಗಿರಿನಗರ ಸಂಗೀತ ಸಭಾ ಸೇರಿದಂತೆ ಒಟ್ಟು ಹತ್ತು ಸಂಸ್ಥೆಗಳಿಗೆ ಧನಸಹಾಯ ಮಾಡುತ್ತಾ ಬಂದಿದೆ.

ಸಂಗೀತ ಸಮ್ಮೇಳನಗಳನ್ನು ಬೆಂಗಳೂರು ಅಥವಾ ಬರೀ ನಗರ ಪ್ರದೇಶಕ್ಕಷ್ಟೇ ಸೀಮಿತವಾಗಿರಿಸದೆ ಹಾಸನ ಜಿಲ್ಲೆ ರಾಮನಾಥಪುರ, ಹೊಳೆನರಸೀಪುರ, ಮೈಸೂರು, ನಂಜನಗೂಡು, ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ, ಗದಗ, ವಿಜಾಪುರ,, ತುಮಕೂರು, ಬಳ್ಳಾರಿ, ಬೇಲೂರು, ಸುಬ್ರಹ್ಮಣ್ಯ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಮುಂತಾದ ಕಡೆಗಳಲ್ಲೂ ಆಯೋಜಿಸಿ ರಾಜ್ಯದ ಎಲ್ಲ ಕಲಾವಿದರಿಗೆ ಅವಕಾಶ ಕಲ್ಪಿಸಿದೆ.

ಗಾನಕಲಾ ಪರಿಷತ್ತಿನ ವೇದಿಕೆಯಲ್ಲಿ ಸಂಗೀತ ವಿದ್ವಾಂಸರಾದ ಡಾ. ಬಾಲಮುರಳಿಕೃಷ್ಣ, ಪಿಟೀಲು ವಾದಕ ಲಾಲಗುಡಿ ಜಯರಾಮನ್, ಆರ್. ಕೆ. ಶ್ರೀಕಂಠನ್, ಎಂ.ಎಸ್. ಗೋಪಾಲಕೃಷ್ಣನ್, ಎಂ.ಎಸ್. ಸುಬ್ಬಲಕ್ಷ್ಮಿ, ಡಿ.ಕೆ.ಪಟ್ಟಮ್ಮಾಳ್, ಎನ್. ರಮಣಿ, ವೀಣೆ ರಾಜಾರಾವ್ ಸೇರಿದಂತೆ ಹಲವು ಸಂಗೀತಗಾರರು ಕಛೇರಿ ನೀಡಿದ್ದರು.

ಹೃದಯ–ಹೃದಯವನ್ನು ಬೆಸೆದು, ಜನರಲ್ಲಿ ಸದ್ಭಾವನೆ ಮೂಡಿಸಿ, ಮಾನಸಿಕ ಒತ್ತಡ ತಗ್ಗಿಸಿ, ನೆಮ್ಮದಿ ಮೂಡಿಸಿ ಎಲ್ಲರೊಳಗೊಂದಾಗುವುದು ಸಂಗೀತದ ವಿಶಿಷ್ಟ ಗುಣ. ಸಂಗೀತ ಎಂಥ ಕಲ್ಲು ಹೃದಯದವನ್ನೂ ಕರಗಿಸುತ್ತದೆ; 'ಹಾಲಿನಲ್ಲಿ ಸಕ್ಕರೆ ಕರಗಿದಂತೆ..'! ಹೀಗೆ ನಿರಂತರ ಸಂಗೀತ ಸೇವೆ ಮಾಡುತ್ತಿರುವ ಗಾನಕಲಾ ಪರಿಷತ್ತು ಇನ್ನೂ ಎತ್ತರೆತ್ತರಕ್ಕೆ ಬೆಳೆಯಲಿ, ನೂರ್ಕಾಲ ಬಾಳಲಿ...!